ದಿನಾಂಕ 20.09.2025 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಭೋದಿಸಲಾಯಿತು.

| | | |
|---|---|---|
| ಸಾಕ್ಷಿದಾರರ ಹೆಸರು | : | ಗಂಗಾಧರ |
| ತಂದೆಯ ಹೆಸರು | : | ಚಿಕ್ಕಮುನಿದಾಸಪ್ಪ |
| ವಯಸ್ಸು | : | 97 ವರ್ಷ |
| ಉದ್ಯೋಗ | : | ಕೊಟೆಕ್ ಮಹಿಂದ್ರಾ ಬ್ಯಾಂಕ್ ಮ್ಯಾನೇಜರ್ |
| ವಾಸಸ್ಥಳ | : | ಚಿಂತಾಮಣಿ |

**ಮುಖ್ಯ ವಿಚಾರಣೆಃ ಶ್ರೀ ಎಸ್ ಇ ಎನ್ ವಕೀಲರಿಂದಃ**

ನಾನು ಕಳೆದ ಎರಡು ವರ್ಷಗಳಿಂದ ಕೊಟೆಕ್ ಮಹಿಂದ್ರಾ ಬ್ಯಾಂಕ್ ನಲ್ಲಿ ಮ್ಯಾನೇಜರ್ ಆಗಿ ಸೇವೆ ಸಲ್ಲಿಸುತ್ತಿದ್ದು ಈ ಪ್ರಕರಣಕ್ಕೆ ಸಂಬಂಧಪಟ್ಟಂತೆ ಸಾಕ್ಷ ನೀಡಲು ಹಾಗೂ ದಾಖಲಾತಿಗಳನ್ನು ಹಾಜರು ಮಾಡಲು ನೋಟಿಸ್ ಜಾರಿ ಆಗಿದ್ದು ಅದರಂತೆ ನಾನು ಈ ದಿನ ಬಿ ಕೆ ರವಿ/ವಾದಿ ಅವರಿಗೆ ಸಂಬಂಧಪಟ್ಟ ನಮ್ಮ ಬ್ಯಾಂಕಗೆ ಸಂಬಂಧಪಟ್ಟ ದಾಖಲಾತಿಗಳನ್ನು ಹಾಜರು ಮಾಡುತ್ತಿದ್ದೇನೆ.

1) ಬಿ ಕೆ ರವಿ/ವಾದಿ ರವರ ನಮ್ಮ ಬ್ಯಾಂಕಿನಲ್ಲಿ ಖಾತೆಯಲ್ಲಿ ನಿರ್ವಹಿಸಲ್ಪಟ್ಟ ಖಾತೆ ಎಕ್ಸಟ್ರಾಕ್ಟ ನಿಡಿ1 ಎಂದು ಗುರುತಿಸಲಾಯಿತು.

2) ಸದರಿ ಬಿ ಕೆ ರವಿ/ವಾದಿ ಖಾತೆಯು 10 ವರ್ಷಗಳಿಗಿಂತ ಮೇಲ್ಪಟ್ಟಿದ್ದು ಅವರಿಗೆ ಸಂಬಂಧಪಟ್ಟ ಚೆಕ್ಕ ನಂ.376552, ಏಳುವರೆ ಲಕ್ಷಕ್ಕೆ ಸಂಬಂಧಪಟ್ಟಂತೆ ಶ್ರೀನಿವಾಸ ರೆಡ್ಡಿ ಹೆಸರಿಗೆ ದಿಃ17.02.2014 ಡ್ರಾ ಮಾಡಿದ್ದು, ಸದರಿ ಚೆಕ್ಕನ್ನು ಬಾಂಬೆ ಬ್ಯಾಂಚ್ ಕಳುಹಿಸಲಾಗಿರುತ್ತದೆ. ಅದನ್ನು ನಿಡಿ2 ಎಂದು ಗುರುತಿಸಲಾಯಿತು. ಈ ಮೊದಲು ನಮ್ಮ ಬ್ಯಾಂಕ್ ವೈಶ್ಯ ಬ್ಯಾಂಕ್ ಆಗಿದ್ದು, ನಂತರ ಐ ಎಂ ಜಿ ವೈಶ್ಯ ಬ್ಯಾಂಕ್ ಆಗಿದ್ದು, ಈಗ ಕೊಟೆಕ್ ಮಹಿಂದ್ರ ಬ್ಯಾಂಕ್ ಆಗಿದೆ.

**<u>ಪಾಟೀ ಸವಾಲು ಶ್ರೀ ಡಿಎಲ್ ಪಿ ವಕೀಲರರಿಂದಃ</u>**

ನನಗೆ ರವಿ ಮತ್ತು ಶ್ರೀನಿವಾಸ ರೆಡ್ಡಿ ಯವರ ವೈಯಕ್ತಿಕ ಪರಿಚಯ ಇಲ್ಲ. ನಿಡಿ 2 ದಾಖಲಾತಿಯಲ್ಲಿ ಸದರಿ ಚೆಕ್ಕು ಬಾಂಬೆ ಕಳುಹಿಸಲಾಗಿದೆ ಎಂದು ಬರೆದಿಲ್ಲ ಆದರೆ ನಮ್ಮ ಚೆಕ್ಕು ನಮ್ಮ ಬ್ಯಾಂಕ್ ನಲ್ಲಿ ಸಿಗದೇ ಇರುವ ಕಾರಣ ಬ್ಯಾಂಕೆಂಡ ಆಫೀಸಗೆ ಕಳುಹಿಸಿದ್ದೇವೆ. ಬ್ಯಾಂಕೆಂಡ ಆಫೀಸ ಎಂದರೆ 10 ವರ್ಷ ಮೇಲ್ಪಟ್ಟ ಚೆಕ್ಕು ದಾಖಲಾತಿಗಳನ್ನು ಸದರಿ ಆಫೀಸಗೆ ಕಳುಹಿಸಲಾಗಿರುತ್ತದೆ. ಆ ರೀತಿ ಕಳುಹಿಸಲಾದ ದಾಖಲಾತಿಯ ದಿನಾಂಕವು ಬ್ಯಾಂಕನಲ್ಲಿ ಸಿಗುತ್ತದೆ. ಈ ಬಗ್ಗೆ ಎಲ್ಲಾ ಬ್ಯಾಂಕಗಳು ದಾಖಲಾತಿಗಳ್ನು ನಿರ್ವಹಿಸಿರುತ್ತಾರೆ. ಒಂದು ಬ್ಯಾಂಕೆಂಡ ಆಫೀಸ ಬೆಂಗಳೂರು ಮತ್ತು ಇನ್ನೊಂದು ಬ್ಯಾಂಕೆಂಡ ಆಫೀಸ ಬಾಂಬೆಯಲ್ಲಿದೆ. ಸದರಿ ದಾಖಲಾತಿಯನ್ನು ಹಾಜರು ಪಡಿಸಬಹುದು ಅದಕ್ಕಾಗಿ ನ್ಯಾಯಾಲಯದ ವತಿಯಿಂದ ಸದರಿ ದಾಖಲಾತಿಯನ್ನು ಹಾಜರು ಮಾಡಿ ಎಂದು ನೋಟಿಸ ಕೊಟ್ಟಲ್ಲಿ ಮಾತ್ರ ಹಾಜರು ಮಾಡಲಾಗುತ್ತದೆ. ನಾವು ಬ್ಯಾಂಕೆಂಡ ಆಫೀಸಗೆ ನ್ಯಾಯಾಲಯುದಿಂದ ನೋಟಿಸ್ ಬಂದಿದೆ ಎಂದು ನಾವು ಲೇಟರ್ ಮಾಡಿದ್ದೇವೆ. ಅದಕ್ಕೆ ಪ್ರತ್ಯುತ್ತರವಾಗಿ ಬ್ಯಾಂಕೆಂಡ ಆಫೀಸ ರವರು ನಿಡಿ2 ದಾಖಲಾತಿಯನ್ನು ಕೊಟ್ಟಿದ್ದಾರೆ. ಬ್ಯಾಂಕೆಂಡ ಆಫೀಸ ರವರಿಗೆ ಕಳುಹಿಸಿದ ಪತ್ರವನ್ನು ನ್ಯಾಯಾಲಯಕ್ಕೆ ಹಾಜರುಪಡಿಸುತ್ತೇವೆ.

**<u>ಮರುವಿಚಾರಣೆ ಇಲ್ಲಃ</u>**

ನನ್ನ ಉಕ್ತಲೇಖನದ ರೀತ್ಯಾ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.

ಓ.ಹೆ.ಕೇ.ಸರಿ ಇದೆ.

ಸಹಿ/

ಹಿರಿಯ ಸಿವಿಲ್ ನ್ಯಾಯಾಧೀಶರು

ಚಿಂತಾಮಣಿ.